# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ–530/2016

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು–560 001,
ದಿನಾಂಕ: 23/02/2017.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರ ಅನ್ವಯ ಶಿಫಾರಸ್ಸು ವರದಿ

ವಿಷಯ: ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳಿಗೆ ಸಂದಾಯವಾಗಬೇಕಾಗಿದ್ದ ವಿದ್ಯಾರ್ಥಿ ವೇತನದ ಬಗ್ಗೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು, ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ವರದಿಯ ನಡವಳಿಕೆ–ಕುರಿತು.,

*****

ಶ್ರೀ ಎನ್.ರಾಮಚಂದ್ರಪ್ಪ, ಹಿರಿಯ ನಾಗರೀಕರು ಹಾಗೂ ಸಮಾಜ ಸೇವಕರು (ನಿವೃತ್ತ ಪ್ರಾಂಶುಪಾಲರು, ನಂ. 123, ವಾರ್ಡ್ ನಂ. 6, ರೈಲ್ವೆ ಸ್ಟೇಷನ್ ರಸ್ತೆ, ಕೋಲಾರ) (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, (1) ಶ್ರೀಮತಿ ಶಾಂತಮ್ಮ, ಸಹಾಯಕ ಸಮಾಜ ಕಲ್ಯಾಣಾಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ, (2) ಶ್ರೀ ರಾಮಸ್ವಾಮಿ, ಸಹಾಯಕ ಸಮಾಜ ಕಲ್ಯಾಣಾಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ ಮತ್ತು, (3) ಶ್ರೀ ವೈ.ಆರ್.ಉಪೇಂದ್ರ, ಪ್ರಥಮ ದರ್ಜೆ ಸಹಾಯಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ (ಇನ್ನು ಮುಂದೆ '1 ರಿಂದ 3ನೇ ಎದುರುದಾರರುಗಳು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ದಾಖಲಿಸಿ, 2012–13ನೇ ಸಾಲಿನ ಹಾಸ್ಟೆಲ್ ವಿದ್ಯಾರ್ಥಿಗಳ ಸಂಬಂಧ "ವಿದ್ಯಾರ್ಥಿ ವೇತನ" (1) ಚೆಕ್ ಸಂಖ್ಯೆ: ಸಿ.ಎಫ್. 807389ಕ್ಕೆ ರೂ.26,936/– ಮತ್ತು, (2) ಚೆಕ್ ಸಂಖ್ಯೆ: ಸಿ.ಎಫ್. 807393ಕ್ಕೆ ರೂ.44,670/– ಅಂದರೆ ಒಟ್ಟು ರೂ.71,606/– ಗಳನ್ನು ದುರುಪಯೋಗ ಪಡಿಸಿಕೊಂಡಿದ್ದಾರೆಂದು

12(1)



ಆರೋಪಿಸಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿಯಲ್ಲಿ ಪ್ರದತ್ತವಿರುವ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ಆನಂತರ ಸದರಿ ದೂರಿನ ತನಿಖೆ ಕೈಗೊಳ್ಳಲು ಸದರಿ ಸಂಸ್ಥೆಯ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕೋಲಾರ ಇವರಿಗೆ ವಹಿಸಿದ್ದು ಸದರಿಯವರು ದೂರಿನ ತನಿಖೆ ಕೈಗೊಳ್ಳಲು ಅವರ ಅಧೀನ ಅಧಿಕಾರಿಯಾದ ಶ್ರೀ ಸಿ.ಎ.ಸಿದ್ದಲಿಂಗಯ್ಯ, ಪೊಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ಕೋಲಾರ (ಇನ್ನು ಮುಂದೆ ತನಿಖಾಧಿಕಾರಿ ಎಂದು ಸಂಬೋದಿಸಲಾಗುವುದು) ಇವರಿಗೆ ವಹಿಸಿದ್ದು, ತನಿಖಾಧಿಕಾರಿಗಳು ದಿನಾಂಕ: 28/09/2016 ರಂದು ತಮ್ಮ ವರದಿಯನ್ನು ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕೋಲಾರ ರವರಿಗೆ ಸಲ್ಲಿಸಿದ್ದು, ಸದರಿ ವರದಿಯನ್ನು ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕೋಲಾರ ರವರು ಒಪ್ಪಿ ತಮ್ಮ ಷರಾದೊಂದಿಗೆ ತಮ್ಮ ವರದಿಯನ್ನು ದಿನಾಂಕ: 28/09/2016 ರಂದು ಸಲ್ಲಿಸಿರುತ್ತಾರೆ.

3. **ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ,**

(1) ಗೌನಪಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳಿಗೆ ಮಂಜೂರಾಗಿದ್ದ ವಿದ್ಯಾರ್ಥಿ ವೇತನ ಶುಲ್ಕ ಚೆಕ್‌ಗಳ ದಿನಾಂಕ: 30/03/2013 ಎಂದು ನಮೂದಿಸಿ ಗೌನಪಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ವಿತರಣೆ ಮಾಡಲಾಗಿರುತ್ತದೆ.

(2) ಸದರಿ ಕಾಲೇಜಿನ ಪ್ರಾಂಶುಪಾಲರು ಹಾಗೂ ದೂರುದಾರರಾದ ಶ್ರೀ ಎನ್.ರಾಮಚಂದ್ರಪ್ಪ ರವರು ಸದರಿ ಚೆಕ್‌ಗಳನ್ನು ದಿನಾಂಕ: 25/06/2013 ರಂದು ಚೆಕ್‌ಗಳ ಹಿಂಭಾಗ ಸಹಿ ಮಾಡಿ ಸ್ವೀಕರಿಸಿರುತ್ತಾರೆ. ಆದರೆ, ಸದರಿ ಚೆಕ್‌ಗಳನ್ನು ದಿನಾಂಕ: 01/07/2013 ರಂದು ಗೌನಪಲ್ಲಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾಗೆ ನಗಧೀಕರಣಕ್ಕೆ ಸಲ್ಲಿಸಿಕೊಂಡಿರುತ್ತಾರೆ.

(3) ಚೆಕ್‌ಗಳ ನಗಧೀಕರಣದ ಅವಧಿ ದಿನಾಂಕ: 30/06/2013ಕ್ಕೆ ಮುಗಿದಿದ್ದ ಕಾರಣ ಬ್ಯಾಂಕಿನಿಂದ ಚೆಕ್‌ಗಳನ್ನು ಸ್ವೀಕರಿಸದೇ ವಾಪಸ್ಸು ನೀಡಿರುತ್ತಾರೆ, ಸದರಿ ಚೆಕ್‌ಗಳು ಮೂರು ತಿಂಗಳ ಅವಧಿಯ ಒಳಗೆ ನಗದೀಕರಣಗೊಳ್ಳದ ಕಾರಣ ಗೌನಪಲ್ಲಿ

12(1)

ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು ದಿನಾಂಕವನ್ನು ನವೀಕರಿಸಲು ಸಮಾಜ ಕಲ್ಯಾಣ ಇಲಾಖೆ, ಶ್ರೀನಿವಾಸಪುರಕ್ಕೆ ದಿನಾಂಕ: 27/08/2013 ರಂದು ಸಲ್ಲಿಸಿಕೊಂಡಿರುತ್ತಾರೆ.

(4) ಶ್ರೀನಿವಾಸಪುರದ ಸಮಾಜ ಕಲ್ಯಾಣ ಇಲಾಖೆಯವರು ಶ್ರೀನಿವಾಸಪುರ ಉಪ ಖಜಾನೆಗೆ ಚೆಕ್‌ಗಳನ್ನು ದಿನಾಂಕ: 16/12/2013 ರಂದು ಸಲ್ಲಿಸಿ ನವೀಕರಣಕ್ಕೆ ಕೋರಿರುತ್ತಾರೆ.

(5) ಉಪ ಖಜಾನೆ ಮತ್ತು ಸಮಾಜ ಕಲ್ಯಾಣ ಇಲಾಖೆ ಶ್ರೀನಿವಾಸಪುರ ರವರ ಪತ್ರ ವ್ಯವಹಾರಗಳಲ್ಲಿ ಮೇಲ್ಕಂಡ ಚೆಕ್‌ಗಳ ದಿನಾಂಕ ನಿವೀಕರಣಗೊಳ್ಳದ ಕಾರಣದಿಂದ ಒಂದು ವರ್ಷಕ್ಕೆ ಮೇಲ್ಪಟ್ಟು ಬ್ಯಾಂಕಿನಲ್ಲಿ ಪಾವತಿಯಾಗದೆ ಇರುವುದು ಕಂಡು ಬಂದಿದ್ದು, ಸದರಿ ಚೆಕ್‌ಗಳು ಜಿಲ್ಲಾ ಖಜಾನೆ ಕೋಲಾರ ರವರ ಮುಖಾಂತರ ಮಹಾಲೇಖಪಾಲಕರು, ಬೆಂಗಳೂರು ರವರಿಗೆ ಸಲ್ಲಿಸಿರುವುದು ಕಂಡುಬಂದಿರುತ್ತದೆ.

(6) ಗೌನಪಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ 2012–13ನೇ ಸಾಲಿನ ಹಾಸ್ಟೆಲ್ ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನ ಶುಲ್ಕಕ್ಕೆ ಸಂಬಂಧಿಸಿದ ಎರಡು ಚೆಕ್‌ಗಳ ಒಟ್ಟು ಮೊತ್ತ ರೂ.71,606/– ಗಳ ನಗದೀಕರಣದಲ್ಲಿ ಈ ಕೆಳಕಂಡವರ ಕರ್ತವ್ಯ ನಿರ್ಲಕ್ಷ್ಯ ಹಾಗೂ ಬೇಜಾವಾಬ್ದಾರಿತನದಿಂದ ಸಕಾಲಕ್ಕೆ ಮೇಲ್ಕಂಡ ಚೆಕ್‌ಗಳ ದಿನಾಂಕ ನವೀಕರಣಗೊಳ್ಳದೇ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಶುಲ್ಕ ಪಾವತಿಯಾಗಿರುವುದಿಲ್ಲ.

(1) ಶ್ರೀ ಎನ್.ರಾಮಚಂದ್ರಪ್ಪ, ಹಿಂದಿನ ಪ್ರಾಂಶುಪಾಲರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಗೌನಪಲ್ಲಿ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ, (ಹಾಲಿ ನಿವೃತ್ತ ಪ್ರಾಂಶಪಾಲರು, ವಾಸ: ನಂ. 123, ವಾರ್ಡ್ ನಂ. 6, ರೈಲ್ವೆ ಸ್ಟೇಷನ್ ರಸ್ತೆ, ಕೋಲಾರ)

(2) ಶ್ರೀ ಕೆ.ಎನ್.ರಾಮಸ್ವಾಮಿ ಬಿನ್ ಲೇಟ್ ನಾರಾಯಣಪ್ಪ, ಹಿಂದಿನ ಸಹಾಯಕ ಸಮಾಜ ಕಲ್ಯಾಣ ಅಧಿಕಾರಿಗಳು, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ (ಹಾಲಿ ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ).

(3) ಶ್ರೀ ಮಹಮದ್ ರಫೀ ಅಹಮದ್, ಪ್ರಭಾರ ಉಪ ಖಜಾನಾಧಿಕಾರಿಗಳು, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ.

4. ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕೋಲಾರ ರವರು ಸಲ್ಲಿಸಿರುವ ವರದಿಯನ್ನು ಪರಿಶೀಲಿಸಲಾಗಿ, ಶ್ರೀ ರಾಮಸ್ವಾಮಿ ರವರು 2ನೇ ಎದುರುದಾರರಾಗಿರುತ್ತಾರೆ ಆದರೆ, ಶ್ರೀ ಎನ್.ರಾಮಚಂದ್ರಪ್ಪ, ಹಿಂದಿನ ಪ್ರಾಂಶುಪಾಲರು, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ ಹಾಗೂ ಶ್ರೀ ಮಹ್ಮದ್ ರಫೀ ಅಹ್ಮದ್, ಪ್ರಭಾರ ಉಪ ಖಜಾನಾಧಿಕಾರಿಗಳು, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ ರವರುಗಳು ದೂರಿನಲ್ಲಿ ಎದುರುದಾರರಾಗಿರುವುದಿಲ್ಲ. ಆದ್ದರಿಂದ, ಮೇಲ್ಕಂಡ ಇಬ್ಬರನ್ನು 4 ಮತ್ತು 5ನೇ ಎದುರುದಾರರುಗಳನ್ನಾಗಿ ಮುಖಪುಟದಲ್ಲಿ implead ಮಾಡಲು ಹಾಗೂ 2, 4 ಮತ್ತು 5ನೇ ಎದುರುದಾರರಿಗೆ ಪೊಲೀಸ್ ಅಧೀಕ್ಷಕರು ಸಲ್ಲಿಸಿರುವ ವರದಿಯನ್ನು ಕಳುಹಿಸಿ, ಈ ಬಗ್ಗೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ತಿಳಿಸಲಾಗಿರುತ್ತದೆ. ಈ ಸಂಬಂಧ, 2, 4 ಮತ್ತು 5ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ, ದೂರಿನ ಆಪಾದನೆಗಳನ್ನು ನಿರಾಕರಿಸಿರುತ್ತಾರೆ. ಪ್ರಸ್ತುತ ಹಂತದಲ್ಲಿ ಸದರಿ 2, 4 ಮತ್ತು 5ನೇ ಎದುರುದಾರರುಗಳ ಆಕ್ಷೇಪಣೆಗಳನ್ನು ಒಪ್ಪಲಾಗುವುದಿಲ್ಲ.

5. **ದೂರಿನಲ್ಲಿ ಇರುವ ಆಪಾದನೆ ಹಾಗೂ ದಾಖಲಾತಿಗಳನ್ನು ಪರಿಶೀಲಿಸಲಾಗಿ 2, 4 ಮತ್ತು 5ನೇ ಎದುರುದಾರರುಗಳು ಈ ಕೆಳಕಂಡಂತೆ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.**

- ಗೌನಪಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳಿಗೆ ಮಂಜೂರಾಗಿದ್ದ ವಿದ್ಯಾರ್ಥಿ ವೇತನ ಶುಲ್ಕ ಚೆಕ್‌ಗಳ ದಿನಾಂಕ: 30/03/2013 ಎಂದು ನಮೂದಿಸಿ ಗೌನಪಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ವಿತರಣೆ ಮಾಡಲಾಗಿರುತ್ತದೆ.
- 4ನೇ ಎದುರುದಾರರು ಹಾಗೂ ದೂರುದಾರರಾದ ಶ್ರೀ ಎನ್.ರಾಮಚಂದ್ರಪ್ಪ ರವರು ಸದರಿ ಚೆಕ್‌ಗಳನ್ನು ದಿನಾಂಕ: 25/06/2013 ರಂದು ಚೆಕ್‌ಗಳ ಹಿಂಭಾಗ ಸಹಿ ಮಾಡಿ ಸ್ವೀಕರಿಸಿರುತ್ತಾರೆ. ಆದರೆ, ಚೆಕ್‌ಗಳನ್ನು ತಡವಾಗಿ ಅಂದರೆ ದಿನಾಂಕ: 01/07/2013 ರಂದು ಗೌನಪಲ್ಲಿ ಯೂನಿಯನ್ ಬ್ಯಾಂಕ್ ಆಫ್

12(1)



ಇಂಡಿಯಾಗೆ ನಗಧೀಕರಣಕ್ಕೆ ಸಲ್ಲಿಸಿಕೊಳ್ಳುವ ಮೂಲಕ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

- ಚೆಕ್‌ಗಳ ನಗಧೀಕರಣದ ಅವಧಿ ದಿನಾಂಕ: 30/06/2013ಕ್ಕೆ ಮುಗಿದಿದ್ದ ಕಾರಣ ಬ್ಯಾಂಕಿನಿಂದ ಚೆಕ್‌ಗಳನ್ನು ಸ್ವೀಕರಿಸದೇ ವಾಪಸ್ಸು ನೀಡಿರುತ್ತಾರೆ, ಸದರಿ ಚೆಕ್‌ಗಳು ಮೂರು ತಿಂಗಳ ಅವಧಿಯ ಒಳಗೆ ನಗದೀಕರಣಗೊಳ್ಳದ ಕಾರಣ ಗೌನಪಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ 4ನೇ ಎದುರುದಾರರು ದಿನಾಂಕವನ್ನು ನವೀಕರಿಸಲು ಸಮಾಜ ಕಲ್ಯಾಣ ಇಲಾಖೆ, ಶ್ರೀನಿವಾಸಪುರಕ್ಕೆ ದಿನಾಂಕ: 27/08/2013 ರಂದು ಸಲ್ಲಿಸಿಕೊಂಡಿರುತ್ತಾರೆ.
- 2ನೇ ಎದುರುದಾರರಾದ ಶ್ರೀ ರಾಮಸ್ವಾಮಿ ರವರು ದಿನಾಂಕ: 27/08/2013 ರಂದು ಸ್ವೀಕರಿಕಸಿದ ಚೆಕ್‌ಗಳನ್ನು ದಿನಾಂಕ: 16/12/2013 ರಂದು ತಡವಾಗಿ ನವೀಕರಣಕ್ಕಾಗಿ ಸಲ್ಲಿಸುವ ಮೂಲಕ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.
- ಉಪ ಖಜಾನೆ ಮತ್ತು ಸಮಾಜ ಕಲ್ಯಾಣ ಇಲಾಖೆ ಶ್ರೀನಿವಾಸಪುರ ಅಂದರೆ 2, 4 ಮತ್ತು 5ನೇ ಎದುರುದಾರರು ರವರ ಪತ್ರ ವ್ಯವಹಾರಗಳಲ್ಲಿ ಮೇಲ್ಕಂಡ ಚೆಕ್‌ಗಳ ದಿನಾಂಕ ನವೀಕರಣಗೊಳ್ಳದ ಕಾರಣದಿಂದ ಒಂದು ವರ್ಷಕ್ಕೆ ಮೇಲ್ಪಟ್ಟು ಬ್ಯಾಂಕಿನಲ್ಲಿ ಪಾವತಿಯಾಗದೆ ಇರುವುದು ಕಂಡು ಬಂದಿದ್ದು, ಸದರಿ ಚೆಕ್‌ಗಳು ಜಿಲ್ಲಾ ಖಜಾನೆ ಕೋಲಾರ ರವರ ಮುಖಾಂತರ ಮಹಾಲೇಖಪಾಲಕರು, ಬೆಂಗಳೂರು ರವರಿಗೆ ಸಲ್ಲಿಸಿರುವುದು ಕಂಡುಬಂದಿರುತ್ತದೆ.
- ಗೌನಪಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ 2012–13ನೇ ಸಾಲಿನ ಹಾಸ್ಟೆಲ್ ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನ ಶುಲ್ಕಕ್ಕೆ ಸಂಬಂಧಿಸಿದ ಎರಡು ಚೆಕ್‌ಗಳ ಒಟ್ಟು ಮೊತ್ತ ರೂ.71,606/– ಗಳ ನಗದೀಕರಣದಲ್ಲಿ ಈ ಕೆಳಕಂಡವರ ಕರ್ತವ್ಯ ನಿರ್ಲಕ್ಷ್ಯ ಹಾಗೂ ಬೇಜಾವಾಬ್ದಾರಿತನದಿಂದ ಸಕಾಲಕ್ಕೆ ಮೇಲ್ಕಂಡ ಚೆಕ್‌ಗಳ ದಿನಾಂಕ ನವೀಕರಣಗೊಳ್ಳದೇ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಶುಲ್ಕ ಪಾವತಿಯಾಗಿಲ್ಲದೇ ಇರುವುದು ಕಂಡುಬರುತ್ತದೆ.

12(1)



(1) ಶ್ರೀ ಎನ್.ರಾಮಚಂದ್ರಪ್ಪ, ಹಿಂದಿನ ಪ್ರಾಂಶುಪಾಲರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಗೌನಪಲ್ಲಿ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ, (ಹಾಲಿ ನಿವೃತ್ತ ಪ್ರಾಂಶಪಾಲರು, ವಾಸ: ನಂ. 123, ವಾರ್ಡ್ ನಂ. 6, ರೈಲ್ವೆ ಸ್ಟೇಷನ್ ರಸ್ತೆ, ಕೋಲಾರ)

(2) ಶ್ರೀ ಕೆ.ಎನ್.ರಾಮಸ್ವಾಮಿ ಬಿನ್ ಲೇಟ್ ನಾರಾಯಣಪ್ಪ, ಹಿಂದಿನ ಸಹಾಯಕ ಸಮಾಜ ಕಲ್ಯಾಣ ಅಧಿಕಾರಿಗಳು, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲ (ಹಾಲಿ ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ).

(3) ಶ್ರೀ ಮಹಮದ್ ರಫೀ ಅಹಮದ್, ಪ್ರಭಾರ ಉಪ ಖಜಾನಾಧಿಕಾರಿಗಳು, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ.

6. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 2, 4 ಮತ್ತು 5ನೇ ಎದುರುದಾರರುಗಳು ಸಾರ್ವಜನಿಕ/ ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸಾರ್ವಜನಿಕ/ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆ ಎಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

7. ಆದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, ಗೌನಪಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳಿಗೆ ಮಂಜೂರಾಗಿದ್ದ ವಿದ್ಯಾರ್ಥಿ ವೇತನ ಶುಲ್ಕ ಚೆಕ್‌ಗಳು ದಿನಾಂಕ ನಿವೀಕರಣಗೊಳ್ಳದ ಕಾರಣದಿಂದ ಒಂದು ವರ್ಷಕ್ಕೆ ಮೇಲ್ಪಟ್ಟು ಬ್ಯಾಂಕಿನಲ್ಲಿ ಪಾವತಿಯಾಗದೆ ಇರುವುದರಿಂದ ಜಿಲ್ಲಾ ಖಜಾನೆ ಕೋಲಾರ ರವರ ಮುಖಾಂತರ ಮಹಾಲೇಖಪಾಲಕರು, ಬೆಂಗಳೂರು ರವರಿಗೆ ವಾಪಸ್ಸು ಕಳುಹಿಸಿಕೊಟ್ಟಿರುವುದರಿಂದ, ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳಿಗೆ ಸಂದಾಯವಾಗಬೇಕಾಗಿದ್ದ ವಿದ್ಯಾರ್ಥಿ ವೇತನದ ಬಗ್ಗೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು, ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

8. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984, ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಈ

12(1)

ವರದಿ ಮುಟ್ಟಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 23/2/17.

**(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)**
**ಉಪಲೋಕಾಯುಕ್ತರು–2,**
**ಕರ್ನಾಟಕ ರಾಜ್ಯ, ಬೆಂಗಳೂರು.**